**ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ**
**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ಕೂಡಲಸಂಗಮ–೫೮೭೧೧೫**
(೦೮೩೫೧)೨೬೮೯೨, ೯೪೮೦೭೨೮೪೯(ಮೊ)

**ತಾ: ಹುನಗುಂದ** **email : avakkudalasangam@gmil.com** **ಜಿ:ಬಾಗಲಕೋಟ**

# I

ಕನ್ನಡ ವಚನಕಾರರಿಗೆ ಜಾಗತಿಕ ಮಟ್ಟದಲ್ಲಿ ಅವರ ವಚನಗಳಿಗೆ ಜಾಗತಿಕ ಸಾಹಿತ್ಯದಲ್ಲಿ ಮಹತ್ವದ ಸ್ಥಾನವಿದೆ. ವಚನಚಳುವಳಿ ಕೇವಲ ಸಾಹಿತ್ಯಕ್ಕೆ ಸೀಮಿತವಾಗಿರದೆ, ಅದರಾಚೆಗಿನ ಸಾಮಾಜಿಕ ಆಂದೋಲನವಾಗಿ ಪರಿಣಮಿಸಿತು. ಇದರಿಂದ 'ಸಮಗ್ರ ಸಮಾಜ ಪರಿವರ್ತನೆ' ವಚನಗಳ ಆಶಯವಾಯಿತು. ಇಂಥ ಉದಾತ್ತ ಆಶಯಗಳಿಂದಾಗಿ ವಚನ ಹಾಗೂ ವಚನಕಾರರನ್ನು ಕುರಿತು ತದನಂತರದ ಕವಿಗಳು, ಲೇಖಕರು ಹಲವು ಪ್ರಕಾರಗಳಲ್ಲಿ ಸಾಹಿತ್ಯ ಕ್ರಿಯೆಗೆ ತೊಡಗಿದರು. ಇಷ್ಟೊಂದು ವ್ಯಾಪಕ ಓದಿಗೆ ಒಳಗಾದ ವಚನಸಾಹಿತ್ಯದ 'ನಿಜದನೆಲೆ'ಯನ್ನು ಪ್ರಮಾಣಬದ್ಧವಾಗಿ ಶೋಧಿಸುವ, ಅಧ್ಯಯನ ಮಾಡುವ ಹೊಣೆಯನ್ನು ನಾಡಿನ ಅನೇಕ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಪೂರೈಯಿಸಿವೆ. ಆದರೆ ಇವುಗಳಿಗಿಂಥ ಭಿನ್ನವಾದ, ಹೆಚ್ಚು ವ್ಯಾಪಕವಾದ, ಸಮಾಜಸಂಸ್ಕೃತಿಯ ಪರಿಪ್ರೇಕ್ಷೆಯುಳ್ಳ ಅಧ್ಯಯನಕ್ಕಾಗಿಯೇ ಸ್ವತಂತ್ರ ಕೇಂದ್ರವನ್ನು ಕರ್ನಾಟಕದಲ್ಲಿ ಸ್ಥಾಪಿಸಿದ ಉದಾಹರಣೆಗಳೇ ಇಲ್ಲ. ಆದರೆ, ಹಂಪಿ ಕನ್ನಡ ವಿಶ್ವವಿದ್ಯಾಲಯ ಇದಕ್ಕಾಗಿಯೇ ಪ್ರತ್ಯೇಕವಾದ 'ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ'ವನ್ನು 2007ರಲ್ಲಿ ಸ್ಥಾಪಿಸಿರುವುದು ಐತಿಹಾಸಿಕ ಸಂಗತಿಯಾಗಿದೆ.

## ಕೇಂದ್ರದ ಉದ್ದೇಶಗಳು :

ನಾಡಿನ ವಿಶ್ವವಿದ್ಯಾಲಯಗಳು, ವಿದ್ವಾಂಸರು ಮತ್ತು ಮಠಮಾನ್ಯಗಳಲ್ಲದೆ, ರಾಷ್ಟ್ರೀಯ ಅಂತಾರಾಷ್ಟ್ರೀಯ ಆಸಕ್ತ ಚಿಂತಕರೊಂದಿಗೆ ರಚನಾತ್ಮಕ ಸಂಬಂಧವನ್ನಿಟ್ಟುಕೊಂಡು ಹಲವಾರು ಯೋಜನೆಗಳನ್ನು ಕೇಂದ್ರವು ರೂಪಿಸಿಕೊಂಡಿದೆ.

## 1. ಸಂಶೋಧನೆ

ವಚನ ಸಂಸ್ಕೃತಿ ಕುರಿತಂತೆ ತಳಸ್ಪರ್ಶಿ ಹಾಗೂ ಬಹುಶಿಸ್ತೀಯ ಅಧ್ಯಯನ ನಡೆಸುವುದು. ವಚನ, ವಚನಕಾವ್ಯ, ಕಾಲಜ್ಞಾನ, ಸ್ವರವಚನ, ಶಾಸನ, ಶಿಲ್ಪ, ದೇವಾಲಯ ಸ್ಥಳಮಹಾತ್ಮೆ, ಆಚರಣೆ, ನಂಬಿಕೆ, ಸಂಪ್ರದಾಯಗಳನ್ನು ಕುರಿತು ಅಧ್ಯಯನ ಮಾಡುವುದು. ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಅವರಿಂದ ಆರಂಭಗೊಂಡ ವಚನ ಅಧ್ಯಯನದ ಮುಂದಿನ ಮಜಲುಗಳಾಗಿ ಸಮಕಾಲೀನ ಭೌದ್ಧಿಕ, ಶೈಕ್ಷಣಿಕ ಹಾಗೂ ವಿದ್ವತ್‌ಅಗತ್ಯಗಳ ಹಿನ್ನೆಲೆಯಲ್ಲಿ ವಚನ ಅಧ್ಯಯನಕ್ಕೆ ಹೊಸ ದಿಕ್ಕನ್ನು ಕಂಡುಕೊಳ್ಳುವದು. ಐತಿಹಾಸಿಕ ಆಲೋಚನೆಗಳ ಪರಿಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು ವಚನಗಳಲ್ಲಿ ವ್ಯಕ್ತವಾಗಿರುವ ಚಿಂತನೆಗಳ ಮೂಲ, ಬೆಳವಣಿಗೆ ಹಾಗೂ ಪರಿವರ್ತನೆಗಳನ್ನು ಕುರಿತು ಸೈದ್ಧಾಂತಿಕ–ವೈಚಾರಿಕ ನೆಲೆಯಲ್ಲಿ ಅಧ್ಯಯನ ಮಾಡುವುದು. ಅನ್ಯಭಾಷಾ ಸಾಹಿತ್ಯದಿಂದ ವಚನಗಳು ಹೇಗೆ ಯಾವ ವಿಚಾರಗಳನ್ನು ತೆಗೆದುಕೊಂಡು ತಮ್ಮ ವೈಚಾರಿಕ ಲೋಕವನ್ನು ನಿರ್ಮಿಸಿಕೊಂಡವು. ಈ ವೈಚಾರಿಕ ಲೋಕ ಜಾಗತಿಕ ಚಿಂತನೆಯ ಹಿನ್ನೆಲೆಯಲ್ಲಿ ಎಂತಹ ಮಹತ್ವ ಪಡೆದಿದೆ. ಎಂಬ ಗುರಿಯನ್ನಿಟ್ಟುಕೊಂಡು ಅಧ್ಯಯನ ಕೈಗೊಳ್ಳುವುದು. ಅಂದರೆ ವಚನ ಮತ್ತು ಭಾರತೀಯ ಭಾಷೆ, ವಚನ ಮತ್ತು ಜಾಗತಿಕ ಭಾಷಾ ಚಿಂತನೆಗಳ ಕೊಡುಕೊಳ್ಳುವಿಕೆಯನ್ನು ತಳಹದಿಮಾಡಿಕೊಂಡು ಅಧ್ಯಯನ ಮಾಡುವುದು ವಚನ ಸಾಹಿತ್ಯ–ಸಂಸ್ಕೃತಿ ಕ್ಷೇತ್ರದಲ್ಲಿ ದುಡಿದ ಪ್ರಾಚೀನ ಕವಿಗಳ, ಟೀಕಾಕಾರ, ಸಂಯೋಜನಕಾರ ಹಾಗೂ ಆಧುನಿಕ ವಿದ್ವಾಂಸರ, ನಾಟಕಕಾರ, ಚಿಂತಕರ ಕುರಿತು ಅಧ್ಯಯನ ಕೈಗೊಳ್ಳುವುದು. ಪಿಎಚ್.ಡಿ ಹಾಗೂ ಎಂಫಿಲ್ ಅಧ್ಯಯನಗಳಿಗೆ ಕೇಂದ್ರದಲ್ಲಿ ಅವಕಾಶ ಕಲ್ಪಿಸಿಕೊಡುವುದು.

## 2. ದಾಖಲೀಕರಣ ಮತ್ತು ವಿಶ್ಲೇಷಣೆ

ಜಾಗತೀಕಮಟ್ಟದಲ್ಲಿ ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ವಚನ ಅಧ್ಯಯನ ಕೈಗೊಳ್ಳಲು ಮತ್ತು ಪ್ರೇರೇಪಿಸಲು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕೇಂದ್ರದ ಚಟುವಟಿಕೆಗಳನ್ನು ದಾಖಲಿಸುವುದು. ಶಿಲ್ಪ, ದೇವಾಲಯ, ಆಚರಣೆ, ಜಾತ್ರೆ, ಉತ್ಸವ ಇತ್ಯಾದಿ ಪುರಾತತ್ವ ಆಕರಗಳ ದಾಖಲೀಕರಣ. ಹೀಗೆ ಕನ್ನಡ ಹಾಗೂ ಕನ್ನಡೇತರ ಭಾಷೆಗಳಲ್ಲಿ ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಅಧ್ಯಯನದ ಆಕರಸೂಚಿಯನ್ನು ದತ್ತ ಕಣಜ (Data Basis) ರೂಪದಲ್ಲಿ ದಾಖಲೀಕರಿಸಿ ಅಧ್ಯಯನಕ್ಕೆ ಅನುವು ಮಾಡಿಕೊಡುವುದು.

### 3. ವಿಚಾರ ಸಂಕಿರಣ-ಉಪನ್ಯಾಸ ಮಾಲೆ-ಕಮ್ಮಟ

ಪ್ರತಿವರ್ಷ ವಚನ ಸಾಹಿತ್ಯ ಕುರಿತಾಗಿ ಎರಡು ದಿನಗಳ ವಚನ ಕಮ್ಮಟಗಳನ್ನು ಏರ್ಪಡಿಸುವುದು. ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಅವರು ಜನಿಸಿದ ಜುಲೈ 3ರನ್ನು ವಚನ ಅಧ್ಯಯನ ದಿನ ಎಂದು ಘೋಷಣೆ ಮಾಡಿ ವಚನ ಸಾಹಿತ್ಯ ಸಮ್ಮೇಳನ ಅಥವಾ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳುವುದು. ವಚನಕಾರರ ಕಾಯಕ ತತ್ವ, ದಾಸೋಹ ಸಿದ್ಧಾಂತ, ಸಾಮಾಜಿಕ ಪ್ರಜ್ಞೆ, ಸಮಾನತೆ ಮುಂತಾದವುಗಳನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ವಚನಸಾಹಿತ್ಯ ಪರಂಪರೆ ಪ್ರಚಾರ ಹೆಸರಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಉಪನ್ಯಾಸಮಾಲೆ ಹಮ್ಮಿಕೊಳ್ಳುವುದು.

### 4. ಪ್ರಕಟಣೆಗಳು

ವಚನ ಸಾಹಿತ್ಯ-ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನ ಫಲಿತಗಳನ್ನು, ವಿಚಾರ ಸಂಕಿರಣ ಮತ್ತು ವಿಶೇಷ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಕನ್ನಡ ಮತ್ತು ಇಂಗ್ಲೀಷನಲ್ಲಿ ಶೈಕ್ಷಣಿಕ ನಿಯತ ಕಾಲಿಕೆಯನ್ನು ಹೊರಡಿಸುವುದು. ವಿಶೇಷವಾಗಿ ವಚನ ಸಂಪುಟಗಳಿಂದ ಸಮಾಜೋಸಾಂಸ್ಕೃತಿಕ ವಚನಗಳನ್ನು ಆಯ್ಕೆಮಾಡಿ 'ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದ ಪತ್ರ'ವನ್ನು ಸಿದ್ಧಪಡಿಸುವುದು.

## II. ಎಂ.ಫಿಲ್ ಪದವಿ ಪಡೆದ ವಿಷಯಗಳು.

1. ದಿಗ್ಗಿ ಸಂಗಮನಾಥ : ಒಂದು ಅಧ್ಯಯನ
   ಸಂಶೋಧನಾ ವಿದ್ಯಾರ್ಥಿ : ಅನುಪಮ ಆದಾಪುರ
   ಮಾರ್ಗದರ್ಶಕರು : ಡಾ.ಕೆ.ರವೀಂದ್ರನಾಥ
   ಪದವಿ ಪಡೆದ ವರ್ಷ : 2010

## III. ಪಿ.ಎಚ್.ಡಿ ಪದವಿ ಪಡೆದ ವಿಷಯಗಳು

1. ಗೋಲಗೇರಿ ಗೋಲ್ಲಾಳೇಶ್ವರ : ಒಂದು ಅಧ್ಯಯನ
   ಸಂಶೋಧನಾ ವಿದ್ಯಾರ್ಥಿ : ಶಿವಶಂಕರ ಈರಪ್ಪ ಬಿರಾದಾರ
   ಮಾರ್ಗದರ್ಶಕರು : ಡಾ.ಜಿ.ಬಿ.ಸಜ್ಜನ
   ಪದವಿ ಪಡೆದ ವರ್ಷ : 2012
2. ಶಿವಯೋಗ ಮಂದಿರ : ಒಂದು ಸಾಂಸ್ಕೃತಿಕ ಅಧ್ಯಯನ
   ಸಂಶೋಧನಾ ವಿದ್ಯಾರ್ಥಿ : ಎ.ಜಿ. ನವೀನಕುಮಾರ
   ಮಾರ್ಗದರ್ಶಕರು : ಡಾ.ಕೆ.ರವೀಂದ್ರನಾಥ
   ಪದವಿ ಪಡೆದ ವರ್ಷ : 2013
3. ಕನ್ನಡ ಟೀಕಿನ ವಚನಗಳು : ಒಂದು ಅಧ್ಯಯನ
   ಸಂಶೋಧನಾ ವಿದ್ಯಾರ್ಥಿ : ನಾಗರಾಜ ಪ. ನಾಡಗೌಡರ
   ಮಾರ್ಗದರ್ಶಕರು : ಡಾ.ಕೆ.ರವೀಂದ್ರನಾಥ
   ಪದವಿ ಪಡೆದ ವರ್ಷ : 2013

4. ಅಕ್ಕಮಹಾದೇವಿ ವಚನಗಳ ಮೀಮಾಂಸೆ
ಸಂಶೋಧನಾ ವಿದ್ಯಾರ್ಥಿ : ಅರ್ಚನಾ ಅಥಣಿ
ಮಾರ್ಗದರ್ಶಕರು : ಡಾ.ಎಸ್.ಎಸ್. ಅಂಗಡಿ
ಪದವಿ ಪಡೆದ ವರ್ಷ : 2015

## IV. ಪ್ರಕಟಣೆಗಳು

1. ವಚನ ಸಾಹಿತ್ಯ ಛಂದೋಲಯ
ಲೇಖಕರು : ಡಾ.ಎಸ್.ಎಸ್.ಅಂಗಡಿ
ಪ್ರಕಾಶನ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 2008

2. ಹರಿಹರನ ಲಿಂಗನಿರಸನ ರಗಳೆಗಳು
ಸಂಪಾದಕರು : ಡಾ.ಗುರುಪಾದ ಮರೆಗುದ್ದಿ
ಪ್ರಕಾಶನ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 2009

3. ಹಿರಿಯರ ಹಿರಿತನ ಹಿಂದೇನಾಯಿತು
ಲೇಖಕರು : ಡಾ.ವಿಜಯಕುಮಾರ ಬೋರಟ್ಟಿ
ಪ್ರಕಾಶನ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 2010

4. ರಾವ್‌ಸಾಹೇಬ ಮಲ್ಲಪ್ಪ ಶಂಕ್ರಪ್ಪ ಸಿಂಹಾಸನ
ಲೇಖಕರು : ಜಿ.ಡಿ.ಸಕ್ರಿ
ಸಂಪಾದಕರು : ಮಹೇಶ ತಿಪ್ಪಶೆಟ್ಟಿ
ಪ್ರಕಾಶನ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– 2011

**5**. ಹಳಕಟ್ಟಿಯವರನ್ನು ಕುರಿತು ಆಂಗ್ಲಭಾಷೆ ಪುಸ್ತಕ. (Discovery of Vachanas)
ಲೇಖಕರು : ವಿಜಯಕುಮಾರ ಬೋರಟ್ಟಿ
ಪ್ರಕಾಶನ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ – 2012

## V. ಕೇಂದ್ರದಿಂದ ಈವರೆಗೆ ನಡೆಸಲಾದ ಶೈಕ್ಷಣಿಕ ಕಾರ್ಯಕ್ರಮಗಳು

| ಕ್ರ.ಸಂ | ಶೀರ್ಷಿಕೆ | ದಿನಾಂಕ | ಸ್ಥಳ |
|---|---|---|---|
| **01** | ವಚನ ಸಾಹಿತ್ಯ : ಸಂವಾದ ಕಮ್ಮಟ | 30–10–2007 ರಿಂದ 31–10–2007 | ಕೂಡಲಸಂಗಮ |
| **02** | ವಚನ ಸಾಹಿತ್ಯ : ಅನುಸಂದಾನದ ನೆಲೆಗಳು | 16–07–2008 ರಿಂದ 17–07–2008 | ಕೂಡಲಸಂಗಮ |
| **03** | ನಿಜಶರಣ ಅಂಬಿಗರ ಚೌಡಯ್ಯನ ವಚನಗಳ ಮುಖಾಮುಖಿ : ವಿಚಾರ ಸಂಕಿರಣ | 22–11–2008 | ಗುಲಬರ್ಗಾ |
| **04** | ಡಾ.ಫ.ಗು.ಹಳಕಟ್ಟಿ ಸಾಹಿತ್ಯ : ವಿಚಾರ ಸಂಕಿರಣ | 2008 | ಕೂಡಲಸಂಗಮ |
| **05** | ಉರಿಲಿಂಗ ಪೆದ್ದಿ : ಸಂಪ್ರದಾಯ ಸಾಹಿತ್ಯ ವಿಚಾರ ಸಂಕಿರಣ | 14–03–2009 | ಬಸವಕಲ್ಯಾಣ |
| **06** | ಹರಿಹರನ ಭೇದನಿರಸನ ದೃಷ್ಟಿ : ವಿಶೇಷ ಉಪನ್ಯಾಸ | 01–05–2009 | ಸೊಂಡೂರು |
| **07** | ವಚನ ಸಾಹಿತ್ಯ ಮತ್ತು ಜಾನಪದ ಸಾಹಿತ್ಯ | 19–06–2009 | ಕೂಡಲಸಂಗಮ |
| **08** | ಡಾ.ಫ.ಗು.ಹಳಕಟ್ಟಿ ದತ್ತಿನಿಧಿ ಕಾರ್ಯಕ್ರಮದ ಅಂಗವಾಗಿ : ವಿಚಾರ ಸಂಕಿರಣ | 28–07–2009 | ಕಾಗವಾಡ |
| **09** | ರಾಜ್ಯಮಟ್ಟದ ವಚನ ಸಾಹಿತ್ಯ ಅಧ್ಯಯನ ಕಮ್ಮಟ | 16–11–2009 ರಿಂದ 17–11–2009 | ಕೂಡಲಸಂಗಮ |
| **10** | ವಚನ ಸಂಸ್ಕೃತಿ ಶಿಬಿರ | 28–09–2010 ರಿಂದ 29–09–2010 | ಬೆಳಗಾವಿ |

| | | | |
|---|---|---|---|
| **11** | ವಚನ ಸಂಸ್ಕೃತಿ ಮತ್ತು ಲಿಂಗಸಮಾನತೆ : ವಚನ ಕಮ್ಮಟ | 10–12–2010 | ವಿಜಯಪುರ |
| **12** | ಬಸವನಬಾಗೇವಡಿ ದೇವಸ್ಥಾನದ ವಾಸ್ತು : 'ಹಿನ್ನೋಟ–ಮುನ್ನೋಟ' ವಿಚಾರ ಸಂಕಿರಣ | 11–12–2010 | ಬಸವನಬಾಗೇವಾಡಿ |
| **13** | ತಳವರ್ಗದ ವಚನಕಾರರ ಸಾಮಾಜಿಕ ಸ್ವರೂಪ : ವಿಚಾರ ಸಂಕಿರಣ | 24–02–2011 ರಿಂದ 25–02–2011 | ಕೂಡಲಸಂಗಮ |
| **14** | ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ | 26–02–2011 ರಿಂದ 28–02–2011 | ಕೂಡಲಸಂಗಮ |
| **15** | ವಚನ ಸಂಗೀತೋತ್ಸವ ಕಾರ್ಯಕ್ರಮ | 16–07–2011 | ಕೂಡಲಸಂಗಮ |
| **16** | ಡಾ.ಫ.ಗು.ಹಳಕಟ್ಟಿ ದತ್ತಿನಿಧಿ ಕಾರ್ಯಕ್ರಮದ ಅಂಗವಾಗಿ : ವಿಚಾರ ಸಂಕಿರಣ | 18–03–2012 | ತುಮಕೂರು |
| **17** | ಬಸವಜಯಂತಿ ಕಾರ್ಯಕ್ರಮ | 30–04–2012 | ಕೂಡಲಸಂಗಮ |
| **18** | ಡಾ.ಫ.ಗು.ಹಳಕಟ್ಟಿ ದತ್ತಿನಿಧಿ ಕಾರ್ಯಕ್ರಮದ ಅಂಗವಾಗಿ : ವಿಚಾರ ಸಂಕಿರಣ | 30–08–2013 | ತಾಳಿಕೋಟಿ |
| **19** | ಡಾ.ಫ.ಗು.ಹಳಕಟ್ಟಿ ದತ್ತಿನಿಧಿ ಕಾರ್ಯಕ್ರಮದ ಅಂಗವಾಗಿ : ವಿಚಾರ ಸಂಕಿರಣ | 30–09–2015 | ಬಸವನಬಾಗೇವಾಡಿ |
| **20** | ಆಧುನಿಕತೆ ಮತ್ತು ದೇಶಿ ಚಿತ್ರಕಲೆ : ರಾಷ್ಟ್ರೀಯ ವಿಚಾರ ಸಂಕಿರಣ | 8–01–2016 ರಿಂದ 10–01–2016 | ಕೂಡಲಸಂಗಮ |
| **21** | ಡಾ.ಫ.ಗು.ಹಳಕಟ್ಟಿ ದತ್ತಿನಿಧಿ ಕಾರ್ಯಕ್ರಮದ ಅಂಗವಾಗಿ : ವಿಚಾರ ಸಂಕಿರಣ | 07–03–2017 | ಬೆಳಗಾವಿ |
| **22** | ಡಾ.ಫ.ಗು.ಹಳಕಟ್ಟಿ ದತ್ತಿನಿಧಿ ಕಾರ್ಯಕ್ರಮದ ಅಂಗವಾಗಿ : ವಿಚಾರ ಸಂಕಿರಣ | 10–10–2017 | ಲಿಂಗಸುಗೂರು |
| **23** | 'ವಚನ ದಿನ'ದ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ | 06–09–2018 | ಕೂಡಲಸಂಗಮ |
| **24** | ಡಾ.ಫ.ಗು.ಹಳಕಟ್ಟಿ ದತ್ತಿನಿಧಿ ಕಾರ್ಯಕ್ರಮದ ಅಂಗವಾಗಿ : ವಿಚಾರ ಸಂಕಿರಣ | 07–03–2019 | ದಾವಣಗೆರೆ |
| **25** | ಬಸವ ಜಯಂತಿ ಸಮಾರಂಭ | 07–05–2019 | ಕನ್ನಡ ವಿಶ್ವವಿದ್ಯಾಲಯ, ಹಂಪಿ |
| **26** | 'ವಚನ ದಿನ'ದ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ | 06–09–2019 | ಕೂಡಲಸಂಗಮ |
| **27** | ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ 2018–19 | 23–03–2019 ರಿಂದ 29–03–2019 | ಕೂಡಲಸಂಗಮ |
| **28** | ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ 2019–20 | 01–03–2020 ರಿಂದ 07–03–2020 | ಕೂಡಲಸಂಗಮ |
| **29** | ವೆಬಿನಾರ್ ವಿಶೇಷ ಉಪನ್ಯಾಸ ಕಾರ್ಯಕ್ರಮ | 27–07–2021 ರಿಂದ 28–07–2021 | ಕೂಡಲಸಂಗಮ |

**ಮುಖ್ಯಸ್ಥರು**
**ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ**
**ಕೂಡಲಸಂಗಮ–587115**